**ಸಾಕ್ಷಿಯನ್ನು ದಿಃ 10.01.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಅರ್ಜಿದಾರರ ಪರ ವಕೀಲರಿಂದಃ**

ಅರ್ಜಿಯಲ್ಲಿ ನಮೂದಿಸಿರುವ ಪಾಲಿಸಿ ನಂಬರ್ ಸರಿಯಾಗಿದೆ ಎಂದರೆ ಸರಿ. 2 ನೇ ಎದುರುದಾರರ ಕಂಪನಿಯಲ್ಲಿ ವಿಮೆದಾರರಾದ ವಿಜಯ್.ಪಿ ರವರು ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಪಾಲಿಸಿಯಲ್ಲಿ ವಿಜಯ್ ರವರ ತಂದೆಯ ಹೆಸರು ಮತ್ತು ಎಲ್ಲಿ ಕೆಲಸ ಮಾಡುತ್ತಿದ್ದರು ಎಂಬ ಬಗ್ಗೆ ನಮೂದು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಹೆಸರು ಮತ್ತು ವಿಳಾಸ ಮಾತ್ರ ನಮೂದು ಮಾಡುತ್ತೇವೆ ಎಂದು ಉತ್ತರಿಸಿರುತ್ತಾರೆ. ನಾವು ಪಕ್ಷಗಾರರಲ್ಲದ ಕಾರಣ ದೋಷರೋಪಣಾ ಪಟ್ಟಿಯನ್ನು ಪ್ರಶ್ನಿಸಿರುವುದಿಲ್ಲ. ನಮ್ಮ ಕಂಪನಿಯಿಂದ ಆಂತರಿಕ ತನಿಖೆ ಮಾಡಿಸಿರುತ್ತೇವೆ. ಸದರಿ ದಾಖಲೆ ಹಾಜರು ಪಡಿಸಿರುವುದಿಲ್ಲ. ಹಾಜರು ಪಡಿಸಲು ತೊಂದರೆ ಇಲ್ಲ. ಅರ್ಜಿದಾರರು ಸ್ವತಃ ಬಿದ್ದಿರುತ್ತಾರೆ ಎಂದು ಹೇಳಿದ್ದು ಆ ಬಗ್ಗೆ ಸಂಬಂಧಪಟ್ಟ ಆಸ್ಪತ್ರೆಯಲ್ಲಿ ವಿಚಾರಿಸಿದ್ದೀರಾ ಎಂದರೆ ಸಾಕ್ಷಿಯು ವಿಚಾರಿಸಿರುತ್ತೇವೆ ಅಲ್ಲಿ ಯಾವುದೇ ದಾಖಲೆ ಸಿಕ್ಕಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಸದರಿ ವಿಷಯವನ್ನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿರುವುದಿಲ್ಲ, ಇದೇ ಪ್ರಪ್ರಥಮವಾಗಿ ನ್ಯಾಯಾಲಯದ ಮುಂದೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಶ್ನಿತ ವಾಹನ ಖಾಸಗಿ ಪ್ಯಾಸೆಂಜರ್ ವಾಹನ ಎಂದರೆ ಸರಿ. ಪಾಲಿಸಿಯನ್ನು ನವೀಕರಿಸುವಾಗ ವಾಹನದ ಸ್ಥಿತಿಯನ್ನು ನೋಡಿ ನವೀಕರಿಸಿರುತ್ತೇವೆ ಎಂದು ಉತ್ತರಿಸಿರುತ್ತಾರೆ. ಮುಂದುವರೆದು ಆನ್ ಲೈನ್ ನಲ್ಲೂ ಪಾಲಿಸಿ ನೀಡುತ್ತೇವೆ ಎಂದು ಉತ್ತರಿಸಿರುತ್ತಾರೆ. ಪ್ರಶ್ನಿತ ವಾಹನಕ್ಕೆ ಅಪಘಾತ ಸಮಯದಲ್ಲಿ ವಿಮೆ ಚಾಲ್ತಿಯಲ್ಲಿತ್ತು ಎಂದರೆ ಸರಿ. ಮುಂದುವರೆದು ಷರತ್ತಿಗೆ ಒಳಪಟ್ಟು ಚಾಲ್ತಿಯಲ್ಲಿತ್ತು ಎಂದು ಉತ್ತರಿಸಿರುತ್ತಾರೆ. ಅಪಘಾತ ಸಮಯದಲ್ಲಿ ವಿಮೆ ಷರತ್ತುಗಳು ಉಲ್ಲಂಘನೆ ಆಗಿರುವುದಿಲ್ಲ ಎಂದರೆ ಸರಿಯಲ್ಲ.

ಅಪಘಾತ ಸಮಯದಲ್ಲಿ ವಿಮೆ ಚಾಲ್ತಿಯಲ್ಲಿರುವ ಕಾರಣ ವಿಮೆದಾರರನ್ನು ಪಕ್ಷಗಾರರನ್ನಾಗಿ ಮಾಡದೇ ಇದ್ದರೂ ನಾವು ಪರಿಹಾರ ನೀಡಬೇಕು ಎಂದರೆ ಸರಿಯಲ್ಲ. ಪ್ರಶ್ನಿತ ವಾಹನವು ನಮ್ಮ ಕಂಪನಿಯಲ್ಲಿ ವಿಮೆಗೆ ಒಳಪಟ್ಟ ಕಾರಣ ನಾವು ಅರ್ಜಿದಾರರಿಗೆ ಪರಿಹಾರ

ನೀಡಲು ಭಾಧ್ಯಸ್ಥರು ಎಂದರೆ ಸರಿಯಲ್ಲ. ಪರಿಹಾರ ನೀಡುವ ಭಾಧ್ಯತೆಯಿಂದ ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪಾಲಿಸಿಯಲ್ಲಿ ನಮೂದು ಮಾಡಿರುವ ವಿಜಯ್ ರವರ ತಂದೆಯ ಹೆಸರು ತಿಳಿದುಕೊಳ್ಳಲು ಪ್ರಯತ್ನ ಪಟ್ಟಿದ್ದೀರಾ ಎಂದರೆ ಸಾಕ್ಷಿಯು ಅವರು ನೀಡಿರುವ ಮಾಹಿತಿಯ ಆಧಾರದ ಮೇಲೆ ಸದರಿ ಮಾಹಿತಿಯನ್ನು ಪಾಲಿಸಿಯಲ್ಲಿ ನಮೂದು ಮಾಡಿರುತ್ತೇವೆ ಎಂದು ಉತ್ತರಿಸಿರುತ್ತಾರೆ. ಅರ್ಜಿದಾರರು ವಿಮಾದಾರರ ವಿಳಾಸ ನೀಡಿ ಎಂದು ಕೋರಿ ನಮ್ಮ ಕಂಪನಿಗೆ ತಮ್ಮ ವಕೀಲರಿಂದ ನೋಟೀಸ್ ಕಳುಹಿಸಿರುತ್ತಾರೆ ಎಂದರೆ ಸರಿಯಲ್ಲ. ಮುಂದುವರೆದು ನಮಗೆ ಯಾವುದೇ ನೋಟೀಸ್ ಬಂದಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ.

(ಈಗ ಒಂದು ದಾಖಲೆ ಸಾಕ್ಷಿಗೆ ತೋರಿಸಿ ಸದರಿ ಪತ್ರ ನಾವು 2 ನೇ ಎದುರುದಾರರಿಗೆ ಕಳುಹಿಸಿರುತ್ತೇವೆ ಎಂದರೆ ಸಾಕ್ಷಿಯು ನಾವು ಪರಿಶೀಲಿಸಬೇಕು ಎಂದು ಹೇಳಿದ ಕಾರಣ ಪಾಟೀ ಸವಾಲನ್ನು ಮುಂದೂಡಲಾಯಿತು.)

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು

ಮತ್ತು ಎಂ.ಎ.ಸಿ.ಟಿ., ಮೈಸೂರು.